**OS: 174-18** **PW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 24.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಜಿ ಕೆ ವಕೀಲರಿಂದ ಃ**

ಒಂದನೇ ಪ್ರತಿವಾದಿ ನನ್ನ ತಾಯಿಯ ತಂದೆ ಅಂದರೆ ಸರಿ. ದಾವಾ ಶೆಡ್ಯೂಲ್ -ಬಿ ಜಮೀನುಗಳು ಮತ್ತು ಮನೆಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಅಂದರೆ ಸರಿ. ಅವು ಫಲವತ್ತಾದ ಜಮೀನುಗಳು ಅಂದರೆ ಸರಿ. ದಾವಾ ಎ- ಆಸ್ತಿ ಮೊದಲು ಖುಲ್ಲಾ ಜಾಗೆ ಇತ್ತು ಅಂದರೆ ಸರಿ. ಅದರಲ್ಲಿ ನನ್ನ ಅಜ್ಜ ಒಂದು ಅಂಸ್ತಿನ ಮನೆ ಕಟ್ಟಿಸಿದ್ದರು ಅಂದರೆ ಸರಿ. ಆ ಮನೆ ಕಟ್ಟಿಸಲು ದಾವಾ ಬಿ-ಜಮೀನುಗಳ ಉತ್ಪನ್ನದಿಂದ ಕಟ್ಟಿಸಲಾಗಿದೆ ಅಂದರೆ ಸರಿ. ಒಂದನೇ ಅಂತಸ್ತನ್ನು ಕಟ್ಟಿಸಲು ನಮ್ಮ ತಂದೆ ಹುಬ್ಬಳ್ಳಿ ಕೋ-ಆಪ್ ಬ್ಯಾಂಕದಲ್ಲಿ ತನ್ನ ತಾಯಿಯ ಹೆಸರಿನಲ್ಲಿ ಸಾಲ ಪಡೆದು ತನ್ನ ತಾಯಿಯ ಮನೆಯನ್ನು ಅಡಮಾನ ಮಾಡಿ ಸಾಲ ಪಡೆದು, ಕಟ್ಟಿಸಿದ್ದಾರೆ ಅಂದರೆ ಸರಿ. ಆ ಸಾಲವನ್ನು ನಮ್ಮ ತಂದೆ ತುಂಬಿದ್ದಾರೆ ಅಂದರೆ ಸರಿ.

**ಪಾಟೀ ಸವಾಲಿಗೆ ಕೆ ಸಿ ಪಾಟೀಲ ವಕೀಲರು ಪ್ರತಿವಾದಿ 4 ಮತ್ತು 5 ಪರ ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.